ವಾರದ ಸಂಚಿಕೆ

SATYAVADI Oldest Newspaper of Mysore

Reg No. M 1299
Daily & Weekly

ಸಂಪುಟ 26 ಸಂಚಿಕೆ 302] ಭಾನುವಾರ 15-5-1943 [3 ಪೈ

This Space is available for Advt.

ಮಲನ ಲೇಖನಗಳನ್ನು ಪ್ರಕಟಿಸಲಾಗುತ್ತೆ

ವರ್ತಮಾನ ಸಂಗ್ರಹ

ಜನರಲ್ ಜೀರೋ, ಜನರಲ್ ಬರ್ಜೆರೆಟ್ ರವರ ಹೆಂಡತಿಯರನ್ನು ಜರ್ಮನರು ದಸ್ತಗಿರಿ ಮಾಡಿರುವರು.

ಬ್ರಿಟನ್ನು ಶಾಂತಿ ಸಮಯದಲ್ಲಿ ವರ್ಷಂಪ್ರತಿ 450 ಮಿಲಿಯ ಕ್ಷೌರದ ಬ್ಲೇಡನ್ನು ಉಪಯೋಗಿಸುತ್ತಿತ್ತು. ಈಗ 112 ಮಿಲಿಯಗಳನ್ನು ಮಾತ್ರ ಉಪಯೋಗಿಸಬೇಕಾಗಿ ಬಂದಿದೆ.

ಬರ್ಮಾರಂಗದಲ್ಲಿ ಕಚಿನ್ ಜಾತಿಯ ಸೈನಿಕರು ಜಪಾನು ಸೈನಿಕರಷ್ಟೇ ಬಲಶಾಲಿಗಳಾಗಿರುವರು.

ಈ ವರ್ಷಾಂತ್ಯದ ವೇಳೆಗೆ ಭೀಷ್ಮ ಪಂತುಲಮ್ಮ, ಗರ್ಭಗರ್ವಭಂಗ, ಊರ್ವಶಿ, ಸೀತಮ್ಮ, ಶ್ರೀ ತ್ಯಾಗರಾಜ ಎಂಬ ತೆಲಗು ಫಿಲಂಗಳು ಪ್ರದರ್ಶನಕ್ಕೆ ಬರುವ ನಿರೀಕ್ಷಣೆ ಇದೆ. ಈ ಯುದ್ಧಕಾಲದಲ್ಲಿಯೂ ಸಿನಿಮಾ ನೋಡುವವರಿಗೆ ಯಾವ ಬಗೆಯ ಆತಂಕವೂ ಇಲ್ಲದೆ ಅವರು ಕಣ್ಣುಗಳಿಗೆ ಹಬ್ಬ ಮಾಡಿಕೊಳ್ಳಲು ಅನುಕೂಲ ದೊರೆಯುತ್ತಿರುವುದು ಒಂದು ಸಂತೋಷ ಸಮಾಚಾರವೇ ಸರಿ. ಹೊಟ್ಟೆಗೆ ಹಬ್ಬವಾಗುವ ಸೌಲಭ್ಯ ದೊರೆತಲ್ಲಿ ಮತ್ತೂ ಉತ್ತಮ

ಪಂಜಾಬು ಸರಕಾರವು ಬಂಧನದಲ್ಲಿರುವ ಮುಖಂಡರ ಭತ್ಯವನ್ನು ದಿನ ಒಂದಕ್ಕೆ 9 ಆಣೆ 3 ಪೈಸೆಯಿಂದ 12 ಆಣೆ 3 ಪೈಗೂ, ಸಾಧಾರಣ ಖೈದಿಗಳ ಭತ್ಯವನ್ನು 3 ಆಣೆಯಿಂದ 8 ಆಣೆಗಳಿಗೂ ಹೆಚ್ಚಿಸಿದೆ

ಇಂಡಿಯಾದಲ್ಲಿರುವಷ್ಟು ವಾಲಂಟಿಯರು ಸೈನ್ಯವು ಮತ್ಯಾವ ದೇಶದಲ್ಲಿಯೂ ಇಲ್ಲ.

ಸ್ವೀಡಿಶ್ ವ್ಯಾಪಾರಿಗಾರರು ಜರ್ಮನಿಯ ಮೂಲಕ ಅಂತರ ಪ್ರಯಾಣ ಮಾಡುವಾಗ, ಜರ್ಮನಿಯವರು ತೊಂದರೆ ಕೊಡುತ್ತಿರುವರೆಂದೂ, ಹಾಗೆ ಮುಂದೆ ಮಾಡಬಾರದೆಂದೂ ಕೇಳಿಕೊಂಡಿರುವೆರು.

ಇಟಲಿಗೆ ಗಂಡಾಂತರವೇ!

ಇಟಲಿಯ ರಕ್ಷಣಾ ಕಾರ್ಯವು ಭದ್ರತೆಯಿಂದ ನಡೆಯುತ್ತಿದೆಯೆಂದೂ, ರಿಟೈವಾಗಿದ್ದ ಮಾರ್ಷಲ್ ಬಿಡೋಗ್ಲಿಯೋ ಈ ಕಾರ್ಯಕ್ಕೆ ನಿಯಮಿಸಲಾಗಿರುವನೆಂದೂ ರಾಜರ ಆಜ್ಞೆಯಂತೆ ಇದೆಲ್ಲಾ ನಡೆಯುತ್ತಿರುವುದೆಂದೂ ಹೇಳಲಾಗಿದೆ.

ಟುನಿಸಿಯಾದಲ್ಲಿ ಇಟಲಿಯವರ 10 ಡಿವಿಜ್ ನಷ್ಟವಾಯಿತೆಂದೂ 23 ಮಂದಿ ಕರ್ನಲ್‌ಗಳು ಖೈದಿಗಳಾದರೆಂದೂ, ಮಿತ್ರರು ಮುಂದೆ ಇಳಿಯಬಹುದಾದ ಸ್ಥಳಗಳಲ್ಲಿ ಭದ್ರತೆಮಾಡಲು ಪ್ರಯತ್ನ ನಡೆಯುತ್ತಿರುವುದೆಂದೂ ಹೇಳಲಾಗಿದೆ.

ಅರಕಾನ್ ರಂಗದಲ್ಲಿ ಮಂಗ್‌ಡಾಯಿಂದ ಬ್ರಿಟಿಷರು ವಾಪಸ್ಸಾದರು.

ಜರ್ಮನರು ರಷ್ಯದ ವೇಲೆ ವನ್ನು ಗ್ಗಬಹುದೆಂದು ಹೇಳಲಾಗಿದೆ

ಇಟಲಿ ಮುಖ್ಯ ಸ್ಥಳದಿಂದ 3 ಮೈಲಿ ಆಚೆ ಹತ್ತಿರದ ಸಿಸಲಿಯಾದ ಮೆಸಿನಾ ರೇವಿನ ಮೇಲೆ ಮಿತ್ರರ ಧಾಳಿ ದಡೆದಿದೆ.

ಮಿತ್ರಮಂಡಲಿಯವರು ಸಾಂಟಲೇರಿಯಾ ಮೇಲೆ ಧಾಳಿ ನಡೆಸುವರೆಂದೂ ಇಟಲಿಯರ ನಿಲ್ದಾಣಗಳ ಮೇಲೆ ಬಾಂಬು ಮಾಡಲಾಯಿತೆಂದೂ ರೋಮೆಲ್ಲನು ತನ್ನ ಜನರಲ್ಲಿ ವಿಶ್ವಾಸ ಕಳೆದುಕೊಂಡಿರುವನೆಂದೂ ಹೇಳಲಾಗಿದೆ.

ನಾವೆಗಳನ್ನು ಕಟ್ಟುವ ರೀತಿ—ಅಮೇರಿಕಾದಲ್ಲಿ ಈಗ ಎಷ್ಟು ಬೇಗನೆ ಜಹಜುಗಳನ್ನು ಕಟ್ಟುವರೆಂಬುದನ್ನು ಫಿಲಂ ರೂಪದಲ್ಲಿ ತಯಾರುಮಾಡಿ ಇಂಗ್ಲೆಂಡಿಗೆ ಕಳಿಸಿರುತ್ತಾರೆ. ಈ ಫಿಲಂನ್ನು ನೋಡಿ ಇಂಗ್ಲೆಂಡಿನಲ್ಲಿ ಇನ್ನು ಮೇಲೆ ಹಡಗುಗಳನ್ನು ಬೇಗಬೇಗನೆ ಕಟ್ಟಲು ಅನುಕೂಲವಾಯಿತು.

ಜಪಾನಿನಲ್ಲಿ ಭೂಕಂಪ!—ಜಪಾನಿನಲ್ಲಿ ಪ್ರತಿಯೊಂದು ವರ್ಷ ಕ್ಕೊಮ್ಮೆ ಭೂಕಂಪವಾಗುತ್ತದೆ. 1923ರಲ್ಲಿ ಯಾಯಿತು. 1933 ರಲ್ಲಿ ಆಯಿತು ಆದ್ದರಿಂದ ಈ ವರ್ಷವೂ ಆಗುವುದೆಂದು ಅಮೇರಿಕನ್ ಶಾಸ್ತ್ರಜ್ಞರು ಹೇಳುತ್ತಾರೆ.

ಅಮೆರಿಕನ್ ಸೇನೆಗಳು—ಅಮೆರಿಕನ್ ಸೇನೆಗಳು ಈ ವರ್ಷ ಅಂತ್ಯದಲ್ಲಿ 27 ಲಕ್ಷಕ್ಕೆ ಏರುವುದು. 1944 ರಲ್ಲಿ 47ವರೇ ಲಕ್ಷಕ್ಕೆ ಒರುವುದು. ಈ ವರ್ಷ ಅಂತ್ಯದಲ್ಲಿ ವಿಮಾನಗಳು 900 ದಳಗಳೂ ಅದರಲ್ಲಿರುವ ವಿಮಾನಕಾರ್ಯ 24ವರೆ ಲಕ್ಷದವರಿಗೂ ತಯಾರಾಗುವರು, ಮಿತ್ರ ವಿಮಾನವು ಶತ್ರುಗಳ ವಿಮಾನಕ್ಕೆ ದ್ವಿಗುಣವಾದಂತಾಯಿತು ಎಂದು ಅಮೇರಿಕನ್ ಸರ್ಕಾರ ಪ್ರಕಟಣೆ.

ಅಂಜೂರದ ಗಿಡದಿಂದ ರಬ್ಬರ್— ಆಸ್ಟ್ರೇಲಿಯಾದಲ್ಲಿ ಒಂದು ತರಹ ಅಂಜೂರದ ಗಿಡವಿದೆ. ಅದರಿಂದ ರಬ್ಬರ್ ತೆಗೆಯಬಹುದೆಂದು ಆಸ್ಟ್ರೇಲಿಯಾ ಶಾಸ್ತ್ರಜ್ಞನೊಬ್ಬನು ಕಂಡುಹಿಡಿದಿರುವನು

ಭೋಜನ ಸಮಾರಂಭ— ಕಪಡರ್ವಡ್‌ನಲ್ಲಿ ಜೈಸಿಗರು ಈಚೆಗೆ ನಡೆದ ಒಂದು ಸಮಾರಂಭದಲ್ಲಿ ಪ್ರತಿ ದಿವಸವೂ ಮಾಮೂಲ್ ಮೇರೆ 7000 ಜನರಿಗೆ ಭೋಜನ ಮಾಡಿಸಿದರು ಇದು ಈಚೆಗೆ ಮುಂಬಯಿ ಸರ್ಕಾರದವರು ಮಾಡಿರುವ ಆಜ್ಞೆ ವಿರುದ್ಧ ಅಂದರೆ 50 ಜನರಿಗಿಂತ ಹೆಚ್ಚು ಜನರು ಭೋಜನಮಾಡಿದ್ದರಿಂದ ಸರಕಾರದವರು ಅವರ ಮೇಲೆ ಮೊಖದ್ದಮ್ಮೆ ಹೂಡಿರುತ್ತಾರೆ.

ಡಾ|| ಶ್ಯಾಮಪ್ರಸಾದ್ ಮುಖರ್ಜಿಗೆ ಗಡಿಪಾರೆ?

ಹಿಂದೂ ಮಹಾಸಭೆಯ ಹಂಗಾಮಿ ಪ್ರೆಸಿಡೆಂಟರಾದ ಡಾ|| ಶ್ಯಾಮಪ್ರಸಾದ ಮುಖರ್ಜಿಯವರು ಬಂಗಾಳ ಮಂತ್ರಿಗಳ ವಿಷಯದಲ್ಲಿ ಅಕ್ಷೇಪಣೆ ಕಾರ್ಯ ನಡೆಸುತ್ತಾರೆಂದು ಅವರನ್ನು ಒಂಗಾಳದಿಂದ ಗಡೀಪಾರುಮಾಡುವ ಸಂಭವವಿದೆಯೆಂದು ಹಿಂದೂಸ್ಥಾನ್ ಪತ್ರಿಕೆಯಲ್ಲಿ ಬರೆದಿರುವರು.

ಮುಂದಿ ವೈಸರಾಯರ್ಯಾರು

ಭಾರತದ ಮುಂದಿನ ವೈಸರಾಯಿ ಪಟ್ಟ ಹೊತಕ್ಕೆ ಡ್ಯೂಕ್ ಆಫ್ ವಿಂಡ್‌ಸರ್‌ರವರಿಗೆ ಕೊಡಬಾರದೆಂದು ಮುಂಬಯಿ ಕ್ರಾನಿಕಲ್ ಕೇಳುತ್ತದೆ.

ರಬ್ಬರ್ ನೌಕೆ

ಈಗ ಜಪಾನರಿಗೆ ಸೇರಿದ ಪೂರ್ವ ದ್ವೀಪಸ್ತೋಮಗಳಲ್ಲಿ ಹೇರಳವಾಗಿ ರಬ್ಬರ್ ಸಿಗುವುದಷ್ಟೆ? ಅಲ್ಲಿಂದ ರಬ್ಬರ್ ನೌಕೆ ತಯಾರು ಮಾಡಿ ಸಾಮಾನುಗಳನ್ನು ಭರ್ತಿಮಾಡಿಕೊಂಡು ಜಪಾನಿಗೆ ಸಾಗಿಸಿ, ಅಲ್ಲಿ ಆ ನೌಕೆಯನ್ನು ಚೂರು ಚೂರು ಮಾಡಿ ಈ ರಬ್ಬರನ್ನು ಇತರ ಕೆಲಸಗಳಿಗೆ ಯಾತಕ್ಕೆ ಉಪಯೋಗಿಸಬಾರದೆಂದು ಯೋಚಿಸುತ್ತಿರುವರು.

ಕೋರ್ಟಿನ ಸಮನ್ ಬಿಸಾಡಿದನು

ಈಗ ಆಂಗ್ಲೇಯ ಪತ್ರಿಕಾಕಾರನಾದ ವಿ|| ಬೆರ್ಲಿನಿಕಲಾಸ್ ಮುಂಬಯಿನಲ್ಲಿರುವನು. ಇವನಿಗೆ ಟಾಜ್‌ಮಹಲ್ ಹೋಟೆಲ್‌ನಲ್ಲಿ ಒಂದು ಮಿಲಿಟರಿ ಸರ್ವಂಟ್ ಒಂತು ಅದು ಈ ರೀತಿ ಇದೆ ಎಂದು ಓದಿ ಚೂರುಚೂರು ಮಾಡಿ ಕಸದ ಬುಟ್ಟಿಗೆ ಎಸೆದನು.

ನಾಯಿಯೂ ಸೈನ್ಯಕ್ಕೆ

ಒಬ್ಬನನ್ನು 3 ಅಥವ 4 ಅವೃತ್ತಿ ಕಚ್ಚಿದ ನಾಯಿಯನ್ನು ಅಮೇರಿಕಾ ಸರಕಾರದವರು "ದೇಶರಕ್ಷಣೆ"ಗೋಸ್ಕರ ಒಂದು ನಾಯಿಯ ಸೈನ್ಯವನ್ನೇರ್ಪಡಿಸಿರುವರು. ಈಗಾಗಲೇ ಒಂದೂ ಕಾಲು ಲಕ್ಷ ನಾಯಿಗಳ ಸೈನ್ಯವಿದೆ.

ಎಲ್ಲೆಲ್ಲಿ ಏನೇನು ?

ಹೈದರಾಬಾದಿನ ಕೋರ್ಟುಗಳಲ್ಲಿ ಲಂಚ ತೆಗೆದು ಕೊಳ್ಳುವುದು ಕಮ್ಮಿ ಆಯಿತೆಂದು ಸರ್ಕಾರದವರೇ ಹೇಳುವರು.

ಇಟಲಿಯ ರಾಜನಾದ ವಿಕ್ಟರ್ ಎಮ್ಯುಲ್ ರಾಜಪರಿತ್ಯಾಗ ಮಾಡುವುದರಿಂದು ಬಲವಾದ ಸಮಾಚಾರವಿದೆ.

ಈಚೆಗೆ ತುರ್ಕಿಯಿಂದ ಬಂದ ಇಟಲಿಯವರು ಯುದ್ಧದ ಸಂಗತಿಯನ್ನೆಲ್ಲಾ ಮಂಪಟ್ಟು ಮಾಡಿಕೊಂಡರು. ಅಲ್ಲದೆ ಈಚೆಗೆ ಇಟಲಿಯ ನೌಕಾಲಿನ ಮಿತ್ರಪಕ್ಷದ ಧ್ವಜವನ್ನು ನೋಡಿ, ಯಾವ ಗಳಿಗೆ ಏನಾಗುತ್ತೋ ಎಂದು ಹೆದರುತ್ತಿರುವಂತೆ

ಫುಸೋಲಿನಿಯು ಹಿಟ್ಲರಿಗೆ ಆಂಟಿ ಏರ್‌ಕ್ರಾಫ್ಟ್ ಗನ್, ಆರ್ಟಿಲರಿಗನ್ ವಿಮಾನಗಳನ್ನು ಇಟಲಿಯನ್ನು ಕಾಪಾಡಲು ಕಳಿಸಬೇಕೆಂದು ಕೇಳಿರುವನು. ಇದು ಹಿಟ್ಲರ್ ಕಡೆಯವರಿಗೆ ಆಶ್ಚರ್ಯವನ್ನುಂಟು ಮಾಡಿರುವುದು.

ಮಧುರೆಯಲ್ಲಿ ಒಬ್ಬ ಕೂಲಿಯವನ ಹತ್ತಿರವಿದ್ದ 1000 ಮಾರ್ಕ್ ಜರ್ಮನ್ ನೋಟುಗಳನ್ನು ಪೋಲೀಸಿನವರು ವಶಪಡಿಸಿಕೊಂಡರು. ಈ ನೋಟುಗಳು ಒಂದು ವಾರದ ಕೆಳಗೆ ನಾರ್ಕಟ್ಟನಲ್ಲಿ ಕೂಲಿಯವನಿಗೆ ಸಿಕ್ಕಿತು.

ಇಪ್ಪಲಿಗೋಸ್ಕರ ಹಣಸೇ ಮರವನ್ನು ಮದರಾಸು ಆಫಿಸತ್ಯನಲ್ಲಿ ಯಾರೂ ಕಡಿಯಿಬಾರದೆಂದು ಸರ್ಕಾರಿ ಆಜ್ಞೆಯಾಗಿದೆ.

ಟ್ಯುನಿಷಿಯಾದಲ್ಲಿ ಜರ್ಮನ್ ದಳಪತಿಯಾದ ಫಾನ್ ಆರ್ನಿಕನ್ನು ಸೆರೆಹಿಡಿದವರು ಭಾರತದ 4 ನೇ ಸೈನ್ಯದವರು.

ಟ್ಯುನಿಷಿಯಾ ಮುತ್ತಿಗೆ ಮುಗಿಯಿತು. ಟ್ಯುನಿಷಿಯಾಕ್ಕೂ ಸಿಸಲಿಗೂ ನಡುವೆ ಇರುವ ಇಟಲಿಯನ ಫ್ಯಾಂಟ್ ಲೇವಿಯಾ ದ್ವೀಪದ ಮೇಲೆ ಮಿತ್ರ ವಿಮಾನ ಧಾಳಿ ಪ್ರಾರಂಭವಾಗಿದೆ

ಉತ್ತರ ಆಫ್ರಿಕಾವು ತಮ್ಮ ಕೈ ತಪ್ಪಲು ಇಟಲಿಯವರು ಫ್ರೆಂಚರಿಪ ಸೇರಿದ ಕಾರ್ಸಿಯ ಎರಡು ಭಾಗವನ್ನು ಆಕ್ರಮಿಸಿಕೊಂಡಿರುವರು.

ನಾರ್ವೆಯಲ್ಲಿ ಜರ್ಮನಿಯ ಎರಡು ಲಕ್ಷ ಸೈನಿಗಳಿರುವರು.

ಹಿಂದೂಸ್ಥಾನದವರು ವರ್ಷಂಪ್ರತಿ 150 ಕೋಟಿ ಗಜ ಬಟ್ಟೆಯನ್ನು ಉಪಯೋಗಿಸುವರು. ಈ ಬಟ್ಟೆಯಿಂದ ಪ್ರಪಂಚವನ್ನು 140 ಸಲ ಸುತ್ತಿಹಾಕಬಹುದು !

ಇಂಡಿಯಾ ಒಂದು ಜನಾಂಗವೇ ?

(ಕಳೆದ ಸಂಚಿಕೆಯಿಂದ ಮುಂದುವರಿದದ್ದು)

ಈಗ ನಾವು ಯೋಚಿಸಬೇಕಾದದ್ದು ಹಿಂದೂಸ್ಥಾನದವರು ಒಂದು ಜನಾಂಗವೇ ? ಒಂದು ಜನಾಂಗವಾಗಲು ಭಾಷೆ ಆಹಾರ, ಉಡಿಗೆ ಎಲ್ಲಾ ಒಂದೇ ತರಹ ಇರಬೇಕು. ಜಾತಿ ವಿಷಯದಲ್ಲಿ ಮೊದಲೇ ಹೇಳಿದೆ. ಒಂದು ಜನಾಂಗಕ್ಕೆ ಆಹಾರ, ಉಡಿಗೆ, ಮತ, ಭಾಷೆ ಇವೆಲ್ಲ ಒಂದೇ ತರಹವಾಗಿರಬೇಕೆಂಬುದನ್ನು ಅನೇಕರು ಹೇಳಬಹುದು. ಇದರಿಂದ ಜನಾಂಗ ವಾಗುವುದಿಲ್ಲ. ವಂಶಾನುಗತವಾಗಿ ಇದೇ ಬೇಕಾದದ್ದು ಎನ್ನಬಹುದು.

ಹಿಂದೂಸ್ಥಾನ ದೊಡ್ಡ ದೇಶ. ಒಂದೊಂದು ಭಾಗದಲ್ಲಿ ಒಂದೊಂದ ತರಹ ದನಸಗಳು ಬೆಳೆಯುತ್ತದೆ. ಋತುಗಳು ಸಹ ಒದಲಾವಣೆಯಿರುತ್ತೆ. ಬೆಲ್ಜಿಯಂ ಸ್ವಿಜರ್‌ಲೆಂಡಿನ ಹಾಗೆ ಸಣ್ಣಪುಟ್ಟ ರಾಜ್ಯಗಳನ್ನು ಈ ವಿಹಾ ದೊಡ್ಡದಾದ ಹಿಂದೂಸ್ಥಾನಕ್ಕೆ ಸಾಟಿ ಮಾಡುವುದಕ್ಕೆ ಆಗುತ್ತದೆಯೇ ? ಬ್ರಿಟಿಷರು ಬೇಸಿಗೆಯಲ್ಲಿ ಬ್ರೈಟನ್‌ನಲ್ಲಿ ಉಪಯೋಗಿಸುವ ಒಟ್ಟಿಗಳನ್ನು ಸದಾ ಕಾಲದಲ್ಲಿಯೂ ಉಪಯೋಗಿಸುತ್ತಾರೆಯೇ ? ನಮ್ಮಲ್ಲಿ ಬೇಸಿಗೆಯಲ್ಲಿ ಉಪಯೋಗಿಸುವ ಒಟ್ಟಿಯನ್ನು ಛಳಿಗಾಲದಲ್ಲಿ ಉಪಯೋಗಿಸಲು ಆಗುತ್ತದೆಯೆ ? ಇದರಿಂದ ನಾವು ಬೇರೆ ಬೇರೆ ಜನಾಂಗವೆಂದು ಹೇಳುವುದಕ್ಕೆ ಆಗುತ್ತದೆಯೆ ? ಎಂದಿಗೂ ಇಲ್ಲ ಬ್ರಿಟಿಷರೂ ಜರ್ಮನಿಯರೂ ಇವರ ಉಡಿಗೆ ತೊಡಿಗೆ, ಆಹಾರ ತೆಗೆದುಕೊಳ್ಳಿ. ಇವರಿಬ್ಬರೂ ಒಂದೇ ತರಹ ಊಟಮಾಡುವರು. ಒಂದೇ ತರಹ ಉಡಿಗೆ ಉಡುವರು. ಈ ಎರಡು ಜನಾಂಗ ಒಂದೋ ? ಇದರಿಂದ ಒಂದೇ ತರಹ ಊಟ, ಒಂದೇ ತರಹ ಉಡಿಗೆ ಇವಿಂದ ಜನಾಂಗ ಒಂದನ್ನಾಗಿ ಮಾಡಲು ಆಗುವುದೇ ಇಲ್ಲ.

ಮುಂದೆ ಮುಂದೆ ಹೋಗುತ್ತಾ ನೋಡಿ. ಜಾತಿ, ಭಾಷೆ ಅಮೇರಿಕಾ ಸಂಯುಕ್ತ ರಾಷ್ಟ್ರ ನೋಡಿ ಇದು ದೊಡ್ಡ ರಾಜ್ಯ ಡೆಮಕ್ರಾಟಿಕ ರಾಜ್ಯವೆಂದು ಪ್ರಸಿದ್ಧಿ ಇಲ್ಲಿ ಯೂರೋಪಿನವರೆಲ್ಲರೂ ಎಲ್ಲಾ ಜನಾಂದವರೂ, ಇಂಗ್ಲಿಷರೂ, ಐರಿಷ್, ಫ್ರೆಂಚ್, ಜರ್ಮನರೂ ತುಂಬಿರುತ್ತಾರೆ. ಇಲ್ಲಿ ಹಿಂದೂಸ್ಥಾನದವರ ಹಾಗೆ ಬೇರೆಬೇರೆ ಜನಾಂಗವಿಲ್ಲ. ದಕ್ಷಿಣ ಆಫ್ರೀಕಾದವರೆಗೆ ಜನರು ಸಹಾ ಇಲ್ಲಿ ಇರುವರು. ಪಶ್ಚಿಮ ಆಸ್ಟ್ರೇರಿಕಾದಲ್ಲಿ ಜಪಾನರು ಹೇರಳವಾಗಿರುತ್ತಾರೆ. ಅವರು ಅಮೇರಿಕಾ ಜನಾಂಗವಾಗಿರುವುದು ಕೆನಡಾದಲ್ಲಿ ಇಂಗ್ಲೀಷರೂ ಫ್ರೆಂಚರೂ ವಾಸಮಾಡುವರು. ದಕ್ಷಿಣಾ ಆಫ್ರಿಕಾದಲ್ಲಿ ಇಂಗ್ಲೀಷರೂ ಡಚ್ಚರೂ ನೆಲಸಿರುವರು. ಅಮೇರಿಕಾ, ಕೆನಡ, ದಕ್ಷಿಣಾ ಆಫ್ರಿಕಾಗಳಲ್ಲಿ ಇಲ್ಲಿನ ಹಾಗೆ ಗೊಂದಲ ಮಾಡಿಕೊಂಡಿರುವರೆ ? ನಾವೆಲ್ಲರೂ ಒಂದೇ ಜನಾಂಗ. ಪಶ್ಚಿಮಾತ್ಯರು ಹೇಳುವ ಹಾಗೆ ನಾವೆಲ್ಲರೂ 3 ಭಾಗವಾಗಿ ಅಂದರೆ ಉತ್ತರದಲ್ಲಿ ಆರ್ಯರೂ, ಆಗ್ನೇಯಲ್ಲಿ ಮಾಂಗೋಲಿಯನ್‌ರೂ, ದಕ್ಷಿಣದಲ್ಲಿ ದ್ರಾವಿಡರೂ ಇರುವರೆಂದು ಇಟ್ಟುಕೊಂಡರೂ ಹಿಂದೂಸ್ಥಾನವೆಲ್ಲಾ ಒಂದೇ ಒಂದು ಜನಾಂಗವೆಂದು ಯಾತಕ್ಕೆ ಕರೆಯಬಾರದು. ಹಿಂದೂಸ್ಥಾನದ ಭಾಷೆಗಳ ಕಡೆ ಗಮನ ಕೊಡೋಣ.

ಬ್ರಿಟನ್ ಯೂರೋಪಿನ ಪಶ್ಚಿಮ ಭಾಗದಲ್ಲಿ ಒಂದು ಸಣ್ಣ ದ್ವೀಪ ಅಲ್ಲಿ ಇಂಗ್ಲೀಷ್, ವೆಲಿಷ್, ಸ್ಕಾಚ್ ಎಂಬ ಮೂರು ಭಾಷೆಗಳನ್ನಾಡುತ್ತಾರೆ. ಇಂಗ್ಲೆಂಡಿಗೆ ಇರುವ ವಿಸ್ತೀರ್ಣವೆಷ್ಟು ? ಹಿಂದುಸ್ಥಾನದ ವಿಸ್ತೀರ್ಣವೆಷ್ಟು ? ಇಂಗ್ಲೆಂಡಿಗೆ 3 ಭಾಷೆಯಾದರೆ ಇಂಗ್ಲೆಂಡಿಗಿಂತ 40 ರೆಷ್ಟು ಹೆಚ್ಚು ವಿಸ್ತೀರ್ಣಗಳ ಹಿಂದೂಸ್ಥಾನಕ್ಕೆ 90 ಭಾಷೆಗಳಾದರೂ ಬೇಡವೆ ? ರಷ್ಯಾದಲ್ಲಿ 100 ಭಾಷೆಗಳನ್ನು ಆಡುತ್ತಾರೆ. ಹಿಂದೂಸ್ಥಾನದಲ್ಲಿ ಸಿಂಧಿ, ಪಂಜಾಬಿ, ಹಿಂದಿ, ಉರ್ದು, ಬೆಂಗಾಲಿ ಉರಿಯ, ಮರಾಠಿ ಗುಜರಾತಿ, ತೆಲಗು, ತಮಿಳು, ಕನ್ನಡ ಮಲೆಯಾಳ ಈ ಹನ್ನೆರಡು ಭಾಷೆಗಳನ್ನು ಮಾತ್ರ ಮಾತನಾಡುತ್ತಿರುತ್ತಾರೆ. ಇವು ಈ ದೇಶಕ್ಕೆ ಹೆಚ್ಚೇ ? ನಾವು ನಾನಾ ಭಾಷೆಯಾಡುತ್ತೇವೆಂದೂ ಒಂದು ಜನಾಂಗವಲ್ಲವೆನ್ನಬಹುದೆ ? ಜಾತಿ, ಮತ, ಭಾಷೆ, ಊಟ ಇವೇ ಒಂದು ಜನಾಂಗದ ಗುರ್ತಲ್ಲ ಜನಾಂಗ ಎಂದರೆ ಒಂದೇ ಉದ್ದೇಶದಿಂದ ಕೆಲಸ ಮಾಡುವುದು, ಒಂದೇ ಸಮನಾಗಿರುವುದು, ಇದು ನನ್ನ ದೇಶ ಎನ್ನುವುದಲ್ಲದೆ ನನ್ನ ಕೆಲಸ ತೀರಿದ ಮೇಲೆ ಈ ದೇಶ ಬಿಟ್ಟು ಹೋಗುತ್ತೇನೆಂಬದಿರುವುದು, ರಾಜಕೀಯ ಸಂಸ್ಥೆಗಳಲ್ಲಿ ಎಲ್ಲರೂ ಭಾಗವಹಿಸುವುದು, ಒಂದೇ ಗವರ್ನರ್ ಹೊಡೆದಾಡುವುದು, ರಾಜಕೀಯ ಸಂಸ್ಥೆಗಳಲ್ಲಿ ಎಲ್ಲರಿಗೂ ಸಮಭಾಗವಿರುವುದು.

ಇದೇ ರೀತಿಯಲ್ಲಿ ಹಿಂದೂಸ್ಥಾನದವ ಹಕ್ಕಿರಬೇಕು. ಇದೇ ಜನಾಂಗ ಅಲ್ಲದೆ ರಿಗೆ ಇನ್ನೇನು ಹೇಳಿದರೂ ಅದು ಒಪ್ಪು ಸತ್ಯವಲ್ಲ. ಹೊಟ್ಟೆಕಿಚ್ಚಿನಿಂದ ನಾಡುವುದು ಎಂದಾಗುವುದ

For All Kinds of
Printing & Binding
The Satyavadi Press
Chamarajapuram
Mysore

Opera — Aryamala

ಅಪೆರಾ——

ಆರ್ಯಮಾಲಾ !
ಆರ್ಯಮಾಲಾ !
ಆರ್ಯಮಾಲಾ !

ಪಿ. ಯು. ಚಿನ್ನಪ್ಪ, ಸಂತಾನಲಕ್ಷ್ಮಿ & ಶಕುಂತಲ, ಎಸ್. ಎಸ್. ಕೃಷ್ಣ
ಟಿ. ಎ. ಮಧುರಂ—ಮುಂತಾದವರು
ಪಾತ್ರವಹಿಸಿರುವರು

ಅಕ್ಕರ ಸಾಮಾಜಿಕ ಭಾವಪರಿಪೂರ್ಣವಾದ ಕಥೆ ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ, ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು ದೊರೆಯುವ ಸ್ಥಳ—
ಸತ್ಯವಾದಿ ಆಫೀಸ್ ಮೈಸೂರು

For good printing
Saraswati Printing Press
Lansdowne Buildings, Mysore
Lakshminarasimha Press
Sriramipet, Mysore

ಸತ್ಯವಾದಿ ಪತ್ರಿಕೆಗೆ
ಚಂದಾದಾರರಾಗಿರಿ
ತಿಂಗಳಿಗೆ ೦—೦—೦

Edited, Printed & published by M. S. Krishna Rao, at the Satyavadi Press. Chamaraja Agrahar, Mysore.